# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : (490) 436

**ಮಾನ್ಯ ಸದಸ್ಯರ ಹೆಸರು** : ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 14.08.2025

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಶ್ರೀ ಆಂಜನೇಯ ಸ್ವಾಮಿ ಜನ್ಮಸ್ಥಾನವೆಂದು ಪ್ರಸಿದ್ಧವಾಗಿರುವ ಅಂಜನಾದ್ರಿ ದೇವಸ್ಥಾನದ ಅಭಿವೃದ್ಧಿ ಸಲುವಾಗಿ ಸರ್ಕಾರದ ವತಿಯಿಂದ ಮಂಜೂರು ಮಾಡಲಾದ ಅನುದಾನವೆಷ್ಟು; ಆ ಪೈಕಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ವಿವರ ನೀಡುವುದು) | ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಶ್ರೀ ಆಂಜನೇಯ ಸ್ವಾಮಿ ಜನ್ಮಸ್ಥಾನವೆಂದು ಪ್ರಸಿದ್ಧವಾಗಿರುವ ಅಂಜನಾದ್ರಿ ಬೆಟ್ಟ ಪ್ರದೇಶ ಅಭಿವೃದ್ಧಿ ಸಲುವಾಗಿ ತಲಾ ರೂ.100.00 ಕೋಟಿಗಳಂತೆ ಒಟ್ಟು 2 ಹಂತಗಳಲ್ಲಿ ರೂ.200.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಈ ಪೈಕಿ,ಮೊದಲ ಹಂತದ ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆಯಿಂದ ರೂ.10.00 ಕೋಟಿಗಳ ಅನುದಾನವನ್ನು ಕರ್ನಾಟಕ ಪ್ರವಾಸೋದ್ಯಮ ಮೂಲ ಸೌಲಭ್ಯ ನಿಗಮ (ಕೆ.ಟಿ.ಐ.ಎಲ್) ಕ್ಕೆ ಬಿಡುಗಡೆ ಮಾಡಲಾಗಿರುತ್ತದೆ. 2ನೇ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆ.ಕೆ.ಆರ್.ಡಿ.ಬಿ) ಯಿಂದ ಭರಿಸಬೇಕಿರುವ 1/3 ರಷ್ಟು ಮೊತ್ತದ ಪೈಕಿ ರೂ.5.20 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಕೊಪ್ಪಳ ರವರಿಗೆ ಬಿಡುಗಡೆ ಮಾಡಿರುತ್ತಾರೆ. |
| ಆ) | ಸದರಿ ದೇವಸ್ಥಾನ ಸಮಗ್ರ ಅಭಿವೃದ್ಧಿ ಸಲುವಾಗಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ; ಅದಕ್ಕೆ ನಿಗದಿಪಡಿಸಿದ ಅನುದಾನವೆಷ್ಟು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/ 156/ ಟಿಡಿಪಿ/2021 (ಭಾ.5), ದಿನಾಂಕ: 19.08.2022 ರಲ್ಲಿ ಅಂಜನಾದ್ರಿ ಬೆಟ್ಟ ಪ್ರದೇಶ ಸಮಗ್ರ ಅಭಿವೃದ್ಧಿ ಸಂಬಂಧ ಮೊದಲ ಹಂತದಲ್ಲಿ ಮಂಜೂರಾಗಿರುವ ರೂ.100.00 ಕೋಟಿಗಳಲ್ಲಿ ಕೈಗೊಳ್ಳಬೇಕಿರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/90/ಟಿಡಿಪಿ/2024, ದಿನಾಂಕ: 10.10.2024 ರಲ್ಲಿ ಅಂಜನಾದ್ರಿ ಬೆಟ್ಟ ಪ್ರದೇಶ ಸಮಗ್ರ ಅಭಿವೃದ್ಧಿ ಸಂಬಂಧ 2ನೇ ಹಂತದಲ್ಲಿ ಮಂಜೂರಾಗಿರುವ ರೂ.100.00 ಕೋಟಿಗಳಲ್ಲಿ ಕೈಗೊಳ್ಳಬೇಕಿರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |

--2

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಜಮೀನುಗಳನ್ನು ಭೂ-ಸ್ವಾಧೀನಪಡಿಸಿಕೊಳ್ಳಲಾಗಿದೆಯೇ; ಪ್ರಸ್ತುತ ಭೂ-ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ; (ವಿವರ ನೀಡುವುದು) | ಉದ್ದೇಶಿತ ಖಾಸಗಿ ಜಮೀನುಗಳ ಭೂಸ್ವಾಧೀನಕ್ಕಾಗಿ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧಿಸೂಚನೆ ದಿನಾಂಕ: 15.09.2022 ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ಅನುದಾನದ ಕೊರತೆಯಿಂದಾಗಿ ಅಧಿಸೂಚನೆಯ ಅವಧಿಯು ಮುಕ್ತಾಯಗೊಂಡು, ಪ್ರಕರಣವು ಅಸಿಂಧುಗೊಂಡಿದ್ದು, ಉದ್ದೇಶಿತ ಭೂ-ಸ್ವಾಧೀನ ಪ್ರಕ್ರಿಯೆಗೆ ಇಲಾಖೆಯಿಂದ ಈವರೆಗೂ ಯಾವುದೇ ಅನುದಾನವನ್ನು ಭೂ-ಸ್ವಾಧೀನಾಧಿಕಾರಿಗಳ ಕಛೇರಿಗೆ ಬಿಡುಗಡೆ ಮಾಡಿರುವುದಿಲ್ಲ. |
| ಈ) | ಭೂ-ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಇಲ್ಲಿಯವರೆಗೆ ಎಷ್ಟು ಅನುದಾನವನ್ನು ಭೂ-ಸ್ವಾಧೀನಾಧಿಕಾರಿಗಳ ಕಛೇರಿಗೆ ಜಮಾ ಮಾಡಿರುತ್ತದೆ? (ವಿವರ ನೀಡುವುದು) | |

**TOR 192 TDV 2025**

(ಎಚ್.ಕೆ.ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

# ಅನುಬಂಧ-1

## ಸರ್ಕಾರದ ಆದೇಶ ಸಂಖ್ಯೆ: ಟಿಒಆರ್/ 156/ ಟಿಡಿಪಿ/2021 (ಭಾ.5), ದಿನಾಂಕ: 19.08.2022 ರಲ್ಲಿ ಅಂಜನಾದ್ರಿ ಬೆಟ್ಟ ಪ್ರದೇಶ ಸಮಗ್ರ ಅಭಿವೃದ್ಧಿ ಸಂಬಂಧ ಮೊದಲ ಹಂತದಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರ

| ಕ್ರ. ಸಂ. | ಕಾಮಗಾರಿಗಳ ಹೆಸರು | ಮೊತ್ತ (ರೂ.ಗಳಲ್ಲಿ) |
|---|---|---|
| 1 | ಪ್ರವಾಸಿ ಮಂದಿರ | 21,33,88,884.00 |
| 2 | ಊಟದ ಹಾಲ್ ಮತ್ತು ಅಡುಗೆಮನೆ | 5,32,39,256.80 |
| 3 | ಸಮುದಾಯ ಭವನ | 1,43,79,709.55 |
| 4 | ನಿಲುಗಡೆಯ ಸ್ಥಳ | 6,46,48,284.00 |
| 5 | ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಸಾರ್ವಜನಿಕ ಶೌಚಾಲಯ | 3,35,89,675.80 |
| 6 | ದೇವಸ್ಥಾನ ಪ್ರವೇಶಕ್ಕೆ ಖಾಲಿ ಜಾಗ | 4,83,97,680.39 |
| 7 | ಪ್ರದಕ್ಷಣಾ ಪಥ | 1,93,32,166.00 |
| 8 | ಸ್ನಾನಘಟ್ಟ | 5,78,83,996.00 |
| 9 | ವಿಐಪಿ ಅತಿಥಿ ಗೃಹ | 3,04,24,067.99 |
| 10 | ಸಿಬ್ಬಂದಿ ಕ್ವಾರ್ಟರ್ಸ್ 20 ಮನೆಗಳು | 8,85,25,593.92 |
| 11 | ವ್ಯಾಖ್ಯಾನ ಕೇಂದ್ರ | 34,28,01,464.10 |
| 12 | 30 ಮೀಟರ್ ರಸ್ತೆ ವಿಸ್ತರಣೆ - 2.1 ಕಿ.ಮೀ. ಬಿಟಿ ರಸ್ತೆ | 3,22,98,300.00 |
| | ಒಟ್ಟು ಸಿವಿಲ್ ಕಾಮಗಾರಿಗಳ ಮೊತ್ತ | 99,89,09,909.08 |
| | QC ವೆಚ್ಚ | 9,98,909.08 |
| | ಇತರೆ ವೆಚ್ಚ | 92,012.36 |
| | ಒಟ್ಟು ಮೊತ್ತ | **100,00,00,000.00** |

# ಅನುಬಂಧ-2

## ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/90/ಟಿಡಿಪಿ/2024, ದಿನಾಂಕ: 10.10.2024 ರಲ್ಲಿ ಅಂಜನಾದ್ರಿ ಬೆಟ್ಟ ಪ್ರದೇಶ ಸಮಗ್ರ ಅಭಿವೃದ್ಧಿ ಸಂಬಂಧ 2ನೇ ಹಂತದಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರ

| ಕ್ರ. ಸಂ. | ಪ್ರಸ್ತಾವಿತ ಯೋಜನೆ | ಒಟ್ಟು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| 1 | ದೇವಸ್ಥಾನ ನವೀಕರಣ | 14.00 |
| 2 | ಆಡಿಯೋ ಸೌಂಡ್ ಶೋ ಮೂಲಕ ರಾಮಾಯಣ ಪ್ರದರ್ಶನ ಮತ್ತು ಥೀಮ್ ಆಧಾರಿತ ಪೇಟಿಂಗ್ | 5.00 |
| 3 | ಧ್ವನಿ ಮತ್ತು ಬೆಳಕು ಕಾರ್ಯಕ್ರಮ | 5.00 |
| 4 | ಅಂಜನಾದ್ರಿಯಿಂದ ಹಂಪಿಯನ್ನು ದೂರದರ್ಶಕದಿಂದ ವೀಕ್ಷಣೆ ಮಾಡುವ ಅನುಭವ | 3.00 |
| 5 | ಅಂಜನಾದ್ರಿ ಬೆಟ್ಟದ ಮುಂದೆ ಥೀಮ್ ಆಧಾರಿತ ಮೆಟ್ಟಿಲುಗಳ ನಿರ್ಮಾಣ | 15.00 |
| 6 | ಅಂಜನಾದ್ರಿ ಬೆಟ್ಟದ ಹಿಂದುಗಡೆ ಥೀಮ್ ಆಧಾರಿತ ಮೆಟ್ಟಿಲುಗಳ ನಿರ್ಮಾಣ | 15.00 |
| 7 | ಪ್ರದಕ್ಷಿಣ ಪಥ ಮುಂದುವರೆದ ಕಾಮಗಾರಿ (Phase – 2) ಮುಂದುವರೆದ ಕಾಮಗಾರಿ | 8.00 |
| 8 | ವಿಐಪಿ ಅತಿಥಿ ಗೃಹ (Phase – 2) ಮುಂದುವರೆದ ಕಾಮಗಾರಿ | 5.00 |
| 9 | ಅಡುಗೆ ಕೊಠಡಿ ಮತ್ತು ಭಕ್ತಾಧಿಗಳಿಗೆ ಊಟದ ಹಾಲ್ ನಿರ್ಮಾಣ (Phase -2) ಮುಂದುವರೆದ ಕಾಮಗಾರಿ | 10.00 |
| 10 | ಸಮುದಾಯ ಭವನ ನಿರ್ಮಾಣ (Phase-2) ಮುಂದುವರೆದ ಕಾಮಗಾರಿ | 5.00 |
| 11 | ಅಂಜನಾದ್ರಿ ಬೆಟ್ಟದ ಪ್ರವೇಶಕ್ಕಾಗಿ ರಾಜ್ಯ ಹೆದ್ದಾರಿ 130 ರಿಂದ ಬೆಟ್ಟದ ಪ್ರವೇಶದವರೆಗೆ ರಸ್ತೆ, ಫುಟ್ ಪಾತ್ ಸಮಗ್ರ ಅಭಿವೃದ್ಧಿ | 5.00 |
| 12 | ಅಂಜನಾದ್ರಿ ಬೆಟ್ಟದ ಮೇಲೆ ದೇವಸ್ಥಾನದ ಸುತ್ತಲೂ ಅಭಿವೃದ್ಧಿ ಕಾಮಗಾರಿಗಳು (ವೇದಿಕೆ, ಕುಡಿಯುವ ನೀರು, ಶೌಚಾಲಯ) | 10.00 |
| | ಒಟ್ಟು | 100.00 |